**ಪತ್ರಿಕಾ ಪ್ರಕಟಣೆ**

ವಿಜಯಪುರ

ದಿನಾಂಕ: 29.08.2021.

**1] ಗಾಂಧಿಚೌಕ ಪೊಲೀಸ ಠಾಣೆ ಗುನ್ನೆ ನಂ: 190/2021 ಕಲಂ: 285 ಐಪಿಸಿ ಮತ್ತು ಕಲಂ:3 (1) (ಎ) (ಬಿ) (ಸಿ) ಮತ್ತು 4 (1) (ಎ) ಎಲ್‌ಪಿಜಿ ರೇಗೂಲೇಷನ್ ಆರ್ಡರ್-2000 ಹಾಗೂ ಅಗತ್ಯ ವಸ್ತುಗಳ ಕಾಯ್ದೆ 1955 ಕಲಂ: 3 ಸಹ ಕಲಂ: 7.**

ದಿನಾಂಕ: 28.08.2021 ರಂದು 17.15 ಗಂಟೆಯ ಸುಮಾರಿಗೆ ಇದರಲ್ಲಿಯ ಆರೋಪಿತನಾದ ಮಹ್ಮದ್ ಫಜಲ್ ತಂದೆ ರಫೀಕ್ ಇನಾಮದಾರ ವಯಾ; 31 ವರ್ಷ ಉದ್ಯೋಗ ವ್ಯಾಪಾರ ಸಾ; ವಿಜಯಪುರ ನಾಗರಬಾವಡಿ ಈತನು ತನ್ನ ಪಾಯ್ದೆಗೋಸ್ಕರ ಈ ಗೃಹ ಬಳಿಕೆಯ ಸಿಲೆಂಡರಗಳಲ್ಲಿಯ ಗ್ಯಾಸ್‌ನ್ನು ತಗೆದು ಹೆಚ್ಚಿನ ಬೆಲೆಗೆ ಎಲ್‌ಪಿಜಿ ಅಟೋಗಳಿಗೆ ಗ್ಯಾಸ್ ತುಂಬಿ ಮಾರಾಟ ಮಾಡುವ ಕಾಲಕ್ಕೆ ಸ್ಪೋಟಗೊಂಡರೆ ಜೀವಕ್ಕೆ ಹಾನಿ ಆಗುತ್ತದೆ ಅಲ್ಲದೆ ಅಕ್ಕಪಕ್ಕದಲ್ಲಿರುವ ಕಟ್ಟಡಗಳಿಗೆ ದಕ್ಕೆ ಉಂಟಾಗುತ್ತದೆ ಎಂಬ ಅಂಶ ಆರೋಪಿತನಿಗೆ ಗೊತ್ತಿದ್ದರೂ ಸಹ ಗೃಹ ಬಳಿಕೆಯ ಸಿಲೆಂಡರ್‌ಗಳನ್ನು ಪತ್ರಾಸ್ ಶೆಡ್ ದಲ್ಲಿ ಅನದೀಕೃತವಾಗಿ ಇಟ್ಟುಕೊಂಡು ಅಟೋಗಳಿಗೆ ಹೆಚ್ಚಿನ ಬೆಲೆಗೆ ತುಂಬಿ ಮಾರಾಟ ಮಾಡುವಾಗ ಸಿಕ್ಕಿದ್ದು ಇರುತ್ತದೆ. ಈ ಬಗ್ಗೆ ಶ್ರೀಮತಿ ರಜಿಯಾಬೇಗಮ್ ಗಂಡ ಮಹಮ್ಮದ್ ಇಸಾಕ್ ಶಿರಗೂರ ಉದ್ಯೋಗ-ಆಹಾರ ನಿರೀಕ್ಷಕರು-02 ಸಹಾಯಕ ನಿರ್ದೇಶಕರು ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆ ವಿಜಯಪುರ ರವರು ಫಿರ್ಯಾದಿ ಕೊಟ್ಟ ಮೇರೆಗೆ ದಿನಾಂಕ: 28.08.2021 ರಂದು ಗಾಂಧಿಚೌಕ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿರುತ್ತದೆ.

**2] ವಿಜಯಪುರ ಗ್ರಾಮೀಣ ಪೊಲೀಸ ಠಾಣೆ ಗುನ್ನಾ. ನಂ: 272/2021 ಕಲಂ: 279, 337, 338 ಐಪಿಸಿ.**

ದಿನಾಂಕ: 26.08.2021 ರಂದು 18:00 ಗಂಟೆ ಸುಮಾರಿಗೆ ಇದರಲ್ಲಿಯ ಆರೋಪಿತನಾದ ನವೀನ ಪಾಂಡಪ್ಪ ಗುಗ್ಗರಿಗೌಡರ ಸಾ॥ ವಿಜಯಪೂರ ಹಾಲಿ ಗುಳೇದಗುಡ್ಡ ಕಾರ ನಂ ಕೆಎ:03 ಎನ್‌ಡಿ:4045 ನೇದ್ದರ ಚಾಲಕ ಈತನು ವಿಜಯಪೂರ ಕಡೆಯಿಂದ ಕೋಲ್ಹಾರ ಕಡೆಗೆ ಹೋಗುವ ಸಲುವಾಗಿ ತನ್ನ ಕಾರನ್ನು ಅತೀ ಜೋರಾಗಿ ಮತ್ತು ನಿಸ್ಕಾಳಜಿಯಿಂದ ನಡೆಯಿಸಿಕೊಂಡು ಬಂದು ವಿಜುಪೂರ ಕಡೆಯಿಂದ ತಮ್ಮುರ ಕಡೆಗೆ ಮೋಟರ ಸೈಕಲ್ ನಂ ಕೆಎ:28 ಇಝುಡ್:8395 ನೇದ್ದರ ಮೇಲೆ ಹೊರಟ ಪಿರ್ಯಾದಿಯ ಮುಂದೆ ಯಾವುದೆ ಸಿಗ್ನಲ್ ವಗೈರೆ ನೀಡದೆ ಒಮ್ಮಲೆ ಬಂದು ನಿಲ್ಲಿಸಿದ್ದು ಅವರಿಬ್ಬರ ನಡುವಿನ ಅಂತರ ಕಡಿಮೆ ಇದ್ದುದರಿಂದ ಪಿರ್ಯಾದಿಯು ತನ್ನ ಮೋಟರ ಸೈಕಲ್ ಬ್ರೇಕ ಹಾಕಿದರು ಅದು ನಿಲ್ಲದೆ ಕಾರಿಗೆ ಹಿಂದಿನ ಬದಿಗೆ ಹಾಯ್ದು ಅಪಘಾತವಾಗಿ ಪಿರ್ಯಾದಿಗೆ ಗಾಯ ಪೆಟ್ಟಾಗಿದ್ದು ಈ ಅಪಘಾತವಾಗಲು ಕಾರ ಚಾಲಕನ ನಿಸ್ಕಾಳಜಿತನವೇ ಕಾರಣ ಈ ಬಗ್ಗೆ ಬೀಮಣ್ಣ ತಂ ಕಲ್ಲಪ್ಪ ಮೂಕಾರ್ತಿಹಾಳ ಸಾ॥ ದದಾಮಟ್ಟಿ ರವರು ಫಿರ್ಯಾದಿ ಕೊಟ್ಟ ಮೇರೆಗೆ ದಿನಾಂಕ: 28.08,2021 ರಂದು ವಿಜಯಪುರ ಗ್ರಾಮೀಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿರುತ್ತದೆ.

**3] ಕಲಕೇರಿ ಪೊಲೀಸ ಠಾಣೆ ಗುನ್ನಾ. ನಂ: 110/2021 ಕಲಂ: 143, 147, 323, 324, 504, 506 ರೆ/ವು 149 ಐಪಿಸಿ.**

ದಿನಾಂಕ: 27.08.2021 ರಂದು 20.00 ಗಂಟೆಗೆ ಇದರಲ್ಲಿ ಆರೋಪಿತರಾದ 1] ಗೊಲ್ಲಾಳಪ್ಪ ಸಿದ್ದಪ್ಪ ಪಟ್ಟಣದವರ 2] ಮಲ್ಲಿಕಾರ್ಜುನ ಸಿದ್ದಪ್ಪ ಪಟ್ಟಣದವರ 3] ಸಂಗಪ್ಪ ಮಲ್ಲಿಕಾರ್ಜುನ ಪಟ್ಟಣದವರ 4] ಸಿದ್ದು ಮಲ್ಲಿಕಾರ್ಜುನ ಪಟ್ಟಣದವರ 5] ನಾನಾಗೌಡ ಶರಣಗೌಡ ಬಿರಾದಾರ ಸಾ। ಎಲ್ಲರೂ ಸಾಸಾಬಾಳ ಗ್ರಾಮದವರು ಫಿರ್ಯಾದಿದಾರ ಮತ್ತು ಆರೋಪಿತರು ಎಲ್ಲರೂ ಸಂಭಂಧೀಕರು ಇದ್ದು, ಫಿರ್ಯಾದಿಯ ತಾಯಿಯಾದ ದೇವಕ್ಕೆಮ್ಮ ಈಕೆಯ ಹೆಸರಿಲೆ ಸಾಸಾಬಾಳ ಗ್ರಾಮ ಸರ್ವೆ ನಂ-01 ರಲ್ಲಿ 2 ಎಕರೆ 30 ಗುಂಟೆ ಜಮೀನು ಇದ್ದು, ಅದರಲ್ಲಿ ಆರೋಪಿ ನಂ-1 ನೇದವನಿಗೆ 6 ಗುಂಟೆ ಜಮೀನು ಬಿಟ್ಟು ಕೊಟ್ಟಿದ್ದು, ಫಿರ್ಯಾದಿದಾರನು ಸಾಸಾಬಾಳ ಗ್ರಾಮದ ಲಕ್ಷ್ಮೀ ದೇವಿ ಗುಡಿ ಹತ್ತಿರ ಡಾಂಬರ ರಸ್ತೆಯ ಮೇಲೆ ಆರೋಪಿತರು ಇದ್ದಾಗ ಅವರಿಗೆ ನೀವು ನಮ್ಮ ಹೊಲದಲ್ಲಿ ಹೆಚ್ಚಿಗೆ ಬಂದೀರಿ ಹೊಲ ಅಳಿಸೋಣ ಅಂತಾ ಅಂದಾಗ ಎಲ್ಲರು ಕೂಡಿ ನಿನ್ನ ಹೊಲದಾಗ ಎಲ್ಲಿ ಬಂದಿವೊ ಬೊಸಡಿ ಮಗನೆ ದು ನಮ್ಮ ಹೊಲ ಇದೆ ಅಂತಾ ಅಂದು ಫಿರ್ಯಾದಿಗೆ ಆರೋಪಿ ನಂ-4 ನೇದವನು ತನ್ನ ಕೈಯಿಂದ ಬಲ ಕಪಾಳಕ್ಕೆ ಹೊಡೆದಿದ್ದು, ಆರೋಪಿ ನಂ 1 ನೇದವನು ತನ್ನ ಕೈಯಲ್ಲಿದ್ದ ಬಡಿಗೆಯಿಂದ ಬೆನ್ನಿಗೆ ಹೊಡೆದಿದ್ದು ನಂತರ ಎಲ್ಲ ಆರೋಪಿತರು ಕೂಡಿ ಇನ್ನೊಮ್ಮೆ ನಮಗೆ ನಿಮ್ಮ ಹೊಲದಲ್ಲಿ ಹೆಚ್ಚಿಗೆ ಬಂದಿದ್ದೇವೆ ಅಂತಾ ಅಂದರೆ ನಿನ್ನ ಜೀವ ಸಹಿತ ಇಡುವುದಿಲ್ಲ ಖಲಾಸ ಮಾಡುತ್ತೇವೆ ಬೊಸಡಿ ಮಗನೆ ಅಂತಾ ಅವಾಚ್ಯವಾಗಿ ಬೈದು ಜೀವದ ಧಮಕಿ ಹಾಕಿದ ಅಪರಾಧ. ಈ ಬಗ್ಗೆ ಪ್ರಭುಗೌಡ ಶರಣಗೌಡ ಬಿರಾದಾರ ಸಾ। ಸಾಸಾಬಾಳ ತಾ। ಸಿಂದಗಿ ರವರು ಫಿರ್ಯಾದಿ ಕೊಟ್ಟ ಮೇರೆಗೆ ದಿನಾಂಕ: 28.08,2021 ರಂದು ಕಲಕೇರಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿರುತ್ತದೆ.